( ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು )

**ದಿಃ12/09/2024**
**ಅಸಲು ದಾವೆ.ನಂ.203/2017**
**ಡಿ.ಬ್ಲ್ಯೂಃ 1**

( ಮುಂದುವರೆದ ಪಾಟೀ ಸವಾಲುಃ ಶ್ರೀ. ಆರ್.ಸಿ. ವಕೀಲರಿಂದ ವಾದಿಯ ಪರವಾಗಿ )

ವಾದಿಯರು ಹಾಕಿರುವ ದಾವಾ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನೀವು ಓದಿ ತಿಳಿದುಕೊಂಡಿರುತ್ತೀರಾ ಎಂದರೆ ಸಾಕ್ಷಿಯು ನಾನು ಓದಿರುವುದಿಲ್ಲ ಎಂದು ನುಡಿಯುತ್ತಾರೆ. ನೀವು ನಿಮ್ಮ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿರುವ ಅಂಶಗಳನ್ನು ಓದಿ ಅಥವಾ ನಿಮ್ಮ ವಕೀಲರ ಮೂಲಕ ಓದಿಸಿ ತಿಳಿದುಕೊಂಡಿದ್ದೀರಾ ಎಂದರೆ ಸಾಕ್ಷಿಯ ಇಲ್ಲ ಎಂದು ನುಡಿಯುತ್ತಾರೆ. ವಾದಿಯರು ದಾವಾ ಶಿರೋನಾವೆಯಲ್ಲಿ ಪ್ರತಿವಾದಿಯ ವಿಳಾಸವನ್ನು ದಡದಹಳ್ಳಿ ಗ್ರಾಮ ಎಂತಲೂ ಮಲ್ಲಿಪಟ್ಟಣ ಹೋಬಳಿ, ಎಂತಲೂ ಕೊಟ್ಟಿರುವುದು ತಪ್ಪಾಗಿರುತ್ತದೆ ಎಂದು ನಾನು ಹೇಳಿಕೆಯಲ್ಲಿ ಹೇಳಿ ಬರೆಯಿಸಿರುವುದಿಲ್ಲ. ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಲಿಖಿತ ಹೇಳಿಕೆಯಲ್ಲಿ ಏನು ಬರೆಯಿಲಾಗಿದೆ ಎಂದು ನನಗೆ ಗೊತ್ತಿಲ್ಲ. ಸದರಿ ಲಿಖಿತ ಹೇಳಿಕೆಯನ್ನು ಯಾರು ಹೇಳಿ ಬರೆಯಿಸಿರುತ್ತಾರೆ ಎನ್ನುವುದು ನನಗೆ ಗೊತ್ತಿಲ್ಲ.

ಹುಲಿಯಯ್ಯನವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಎಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತು. ಸದರಿಯವರ ಮರಣ ಪ್ರಮಾಣ ಪತ್ರ ನನ್ನ ಬಳಿ ಇದೆಯೋ ಎಂದು ನಾನು ನೋಡಬೇಕು. ಸದರಿ ಮರಣ ಪ್ರಮಾಣ ಪತ್ರ ನಮ್ಮ ಮನೆಯಲ್ಲಿ ಯೇ ಇರುತ್ತದೆ. ಸದರಿ ಮರಣ ಪ್ರಮಾಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ಅಭ್ಯಂತರವಿರುವುದಿಲ್ಲ.

ದ್ಯಾವಯ್ಯ ಬೊಮ್ಮನಹಳ್ಳಿ ಗ್ರಾಮದವರು. ಸದರಿಯವರು ಸುಮಾರು 32 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಅವರ ಮರಣ ಪ್ರಮಾಣ ಪತ್ರ ಇದೆಯೋ ಎಂದು ನನಗೆ ಗೊತ್ತಿಲ್ಲ. ಅವರು ಮರಣ ಹೊಂದಿರುವ ವರ್ಷ ಮತ್ತು ದಿನಾಂಕ ನನಗೆ ಗೊತ್ತು. ಹುಚ್ಚಮ್ಮ ಹಿರೇಹಳ್ಳಿ ಗ್ರಾಮದವರು. ಸದರಿ ಹುಚ್ಚಮ್ಮನವರು ಯಾವಾಗ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಅವರು ಅವರ ತಂದೆಯ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಸದರಿ ಹುಲಿಯಯ್ಯ, ಹುಚ್ಚಮ್ಮ ಮತ್ತು ದ್ಯಾವಯ್ಯರವರುಗಳ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಸದರಿಯವರುಗಳ ಮರಣ ಪ್ರಮಾಣ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸದೇ ಇದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯ ಲ್ಲ.

ಜವರಮ್ಮನವರು ಶಿರಂಗಾಲ ಗ್ರಾಮದವರು. ಅವರು ನಮ್ಮ ಮನೆಯಲ್ಲಿ ಮರಣ ಹೊಂದಿರುತ್ತಾರೆ. ಅವರು ನಮ್ಮ ಮನೆಯಲ್ಲಿ ಸುಮಾರು 40 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ. ಧರ್ಮಯ್ಯರವರು ಪ್ರಸ್ತುತ ನಮ್ಮ ಊರಿನಲ್ಲಿಯೇ ವಾಸವಾಗಿದ್ದಾಗಿರೆ.ಕಪಲಯ್ಯನವರು ಯಾವಾಗ, ಎಲ್ಲಿ ಮರಣ ಹೊಂದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ದ್ಯಾವಮ್ಮನವರು ಚಿಕ್ಕಬೊಮ್ಮನಹಳ್ಳಿ ಗ್ರಾಮದವರು. ಅವರು ಹಿರೇಹಳ್ಳಿ ಗ್ರಾಮದಲ್ಲಿ ಮರಣ ಹೊಂದಿರುತ್ತಾರೆ. ಕಪಲಯ್ಯ ಮತ್ತು ದ್ಯಾವಮ್ಮನವರು ಪತಿ ಪತ್ನಿಯರು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಹುಲಿಯಯ್ಯ, ಹುಚ್ಚಮ್ಮ, ಕಪಲಯ್ಯ, ದ್ಯಾವಮ್ಮ, ದ್ಯಾವಯ್ಯ ಜವರಮ್ಮ, ರವರುಗಳಿಗೆ ಸಂಬಂಧಿ ಹಳದಿ ಕಾರ್ಡ್ ಹಾಗೂ ಮತದಾರರ ಗುರುತಿನ ಚೀಟಿಯನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಸದರಿಯವರೆಲ್ಲಾರೂ ಒಂದೇ ಕುಟುಂಬಕ್ಕೆ ಸೇರಿದವರು ಎಂಬುದಕ್ಕೆ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲಾಗಿದೆ. ಅವರಿಗೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ನ್ಯಾಯಾಯಕ್ಕೆ ಹಾಜರು ಪಡಿಸದೇ ಇದ್ದರೂ ಅದನ್ನು ಹಾಜರು ಪಡಿಸಿರುವುದಾಗಿ ಸುಳ್ಳು ಹೇಳುತ್ತಿದೇನೆ ಎಂದರೆ ಸರಿಯಲ್ಲ.

ನನಗೆ ಓದಲು ಬರೆಯಲು ಬರುವುದಿಲ್ಲ ಎಂದರೆ ಸರಿ. ಅದ್ದರಿಂದ ನಾನು ಹಾಜರು ಪಡಿಸಿರುವ ಯಾವ ಯಾವ ದಾಖಲೆಗಳಲ್ಲಿ ಯಾರ ಯಾರ ಹೆಸರು ಇದೆ ಎಂದು ನನಗೆ ಗೊತ್ತಿಲ್ಲ ಎಂದರೆ ಸರಿಯಲ್ಲ. ನನ್ನ ಪತಿಯ ಊರು ಯಲಕದಹಳ್ಳಿ, ಸದರಿ ಯಲಕದಹಳ್ಳಿ ಯಾವ ಹೋಬಳಿ ಬರುತ್ತದೆ ಎಂದು ನನಗೆ ಗೊತ್ತಿಲ್ಲ, ಅದು ಅರಕಲಗೂಡು ತಾಲ್ಲೂಕಿಗೆ ಬರುತ್ತದೆ. ನನ್ನ ಪತಿಯ ತಂದೆಯ ಹೆಸರು ಸಣ್ಣಯ್ಯ. ದಾವಾ ಅನುಸೂಚಿ ಸ್ವತ್ತು ಈ ವರ್ಷ ಪಾಳು ಬಿದ್ದಿದೆ ಎಂದರೆ ಸಾಕ್ಷಿಯು ಮಾಡಿದ್ದೀವಿ ಎಂದು ನುಯುತ್ತಾರೆ.

ವಾದಿಯರು ಈ ದಾವೆಯನ್ನು ಸಲ್ಲಿಸುವ ಮುಂಚೆ ವಾದಿಯರು ದಾವಾ ಅನುಸೂಚಿ ಸ್ವತ್ತಿನಲ್ಲಿ ಮನೆಯನ್ನು ಕಟ್ಟಬಾರದು ಎಂದು ತಕರಾರನ್ನು ಸಲ್ಲಿಸಿದ್ದೇನು ಎಂದರೆ ಸರಿ. ಸಾಕ್ಷಿಯು ಮುಂದುರೆದು ನಾನು ತಕರಾರು ಮಾಡಿಲ್ಲ ಎಂದು ನುಡಿಯುತ್ತಾರೆ. ನಾನು ತಕರಾರು ಮಾಡಿರುವುದಕ್ಕೆ ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ವಾದಿಯರು ಈ ದಾವೆಯನ್ನು ಸಲ್ಲಿಸಿರುವುದು ಎಂದರೆ ನನಗೆ ಗೊತ್ತಿಲ್ಲ. ಪ್ರಸ್ತುತ ದಾವೆಯನ್ನು ಸಲ್ಲಿಸಿದ ನಂತರವೂ ಕೂಡ ನನ್ನ ಅಳಿಯ ರಾಜು ಹಾಗೂ ಗೋಂದಯ್ಯರವರು ದಾವಾ ಅನುಸೂಚಿ ಸ್ವತ್ತಿನ ಬಳಿ ಬಂದು ಗಲಾಟೆಯನ್ನು ಮಾಡಿರುತ್ತಾರೆ ಎಂದರೆ ಸರಿಯಲ್ಲ.

ಚಿಕ್ಕಬೊಮ್ಮನಹಳ್ಳಿ ಗ್ರಾಮದ ಕಪಲಯ್ಯಃಉಃಈರಯ್ಯನವರ ಮಗ ಬುಂಡಯ್ಯನವರು ಚನ್ನಯ್ಯನ ಮಗ ಸಣ್ಣಯ್ಯರವರಿಗೆ ಬರೆದುಕೊಟ್ಟ ನಿಪಿ–1ರ ಚೆಕ್ಕುಬಂದಿಯನ್ನು ತಿಳಿಕೊಂಡಿದ್ದೀರಾ ಎಂದರೆ ಸಾಕ್ಷಿಯು ಅದು ಸುಳ್ಳು ಎಂದು ನುಡಿಯುತ್ತಾರೆ. ಸದರಿ ನಿಪಿ–1ರಲ್ಲಿರುವ ದಾವಾ ಅನುಸೂಚಿ ಸ್ವತ್ತಿನ ಪೂರ್ವ ಓಣಿ ಇತ್ತು ಎಂದರೆ ಸರಿ. ಸದರಿ ಓಣಿಯನ್ನು ಈಗ ಕಾಂಕ್ರಿಟ್ ರಸ್ತೆ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಅದು ಈಗಲೂ ಓಣಿಯೇ ಇರುತ್ತದೆ ಎಂದು ನುಡಿಯುತ್ತಾರೆ. ಬುಂಡಯ್ಯನವರು ಬರೆದುಕೊಟ್ಟ ಜಮೀನಿನ ಪಶ್ಚಿಮಕ್ಕೆ ಕಳಸಯ್ಯನವರ ಹೊಲ ಇತ್ತು ಎಂದರೆ ಸರಿ.ಈಗ ಅದು ತಮ್ಮೇಗೌಡ, ನಿಂಗೇಗೌಡ ಹಾಗೂ

ಲೋಕೇಶ ರವರ ಹೊಲ ಆಗಿದೆ ಎಂದರೆ ಸರಿ. ಸದರಿ ಕಳಸಯ್ಯನವರು ನಿಂಗೇಗೌಡ ಹಾಗೂ ಲೋಕೇಶ್ ರವರಿಗೆ ಸದರಿ ಹೊಲವನ್ನು ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಬುಂಡಯ್ಯನವರ ಮಾರಾಟ ಮಾಡಿದ ಸ್ವತ್ತಿನ ಉತ್ತರಕ್ಕೆ ಮೊದಲು ಸರ್ಕಾರಿ ಓಣಿ ಇತ್ತು ಎಂದರೆ ಸರಿ. ಅದು ಈಗ ಟಾರು ರಸ್ತೆಯಾಗಿ ಅಬ್ಬೂರು ಸೋಮವಾರಪೇಟೆ ರಸ್ತೆಯಾಗಿರುತ್ತದೆ ಎಂದರೆ ಸರಿ. ಬುಂಡಯ್ಯನವರು ಮಾರಾಟ ಮಾಡಿದ ಸ್ವತ್ತಿನ ದಕ್ಷಿಣಕ್ಕೆ ಅವರದ್ದೇ ಸ.ನಂಃ43ರ ಸ್ವತ್ತು ಇತ್ತು ಎಂದರೆ ಸರಿ. ಸದರಿ ಸ.ನಂಃ43ರ ಜಮೀನಿನಲ್ಲಿ 2 ಎಕರೆ ಜಮೀನು ಇತ್ತು ಎಂದರೆ ಸರಿಯಲ್ಲ. ಸದರಿ 2 ಎಕರೆ ಪೈಕಿ 1 ಎಕರೆ ಧರ್ಮಯ್ಯನವರಿಗೆ ಖಾತೆ ಇದೆ ಎಂದರೆ ಸರಿ. ಬುಂಡಯ್ಯನವರಿಗೆ ಸೇರಿದ ಆಸ್ತಿಯಲ್ಲಿ ನನ್ನ ಹಾಗೂ ಧರ್ಮಯ್ಯನವರ ಹೆಸರಿನಲ್ಲಿ ಒಂದೊಂದು ಎಕರೆಯ ಖಾತೆ ಇದೆ ಎಂದರೆ ಸರಿ. ಸದರಿ ಸ.ನಂಃ 43ರ ಸ್ವತ್ತಿನಲ್ಲಿ ಧರ್ಮಯ್ಯನವರು ಮನೆಯನ್ನು ಕಟ್ಟಿರುತ್ತಾರೆ ಎಂದರೆ ಸರಿ.

ದಾವಾ ಸರ್ವೆ ನಂಬರ್ ಗೆ ಸಂಬಂಧಪಟ್ಟಂದತೆ ಚನ್ನಯ್ಯನ ಮಗ ಸಣ್ಣಯ್ಯನವರು ಬದುಕಿದ್ದ ಸಮಯದಲ್ಲಿ ಸದರಿ ಸ್ವತ್ತಿನ ಖಾತೆಯನ್ನು ಅವರ ಹೆಸರಿಗೆ ಮಾಡಿಸಿಕೊಂಡು ನಿಪಿ–5ರಂತೆ ಪಟ್ಟಾ ಪುಸಕ್ತವೂ ಕೂಡ ಅಗಿರುತ್ತದೆ ಎಂದರೆ ಸರಿಯಲ್ಲ. ನಿಪಿ–5ನ್ನು ಮೈಸೂರು ಸರ್ಕಾರ ಇದ್ದಾಗಲೇ ಭೂಕಂದಾಯ ಇಲಾಖೆಯವರು ಸಣ್ಣಯ್ಯನವರ ಹೆಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. 1969–70ನೇ ಸಾಲಿನಲ್ಲಿಯೇ ನಿಪಿ–5ನ್ನು ಸದರಿ ಸಣ್ಣಯ್ಯನವರ ಹಸರಿಗೆ ಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ದಿಃ02–02–1971ರಂದು 6.38 ಪೈಸೆ ಹಾಗೂ ದಿಃ16–01–1972ರಂದು 6.38 ಪೈಸೆ ಯನ್ನು ಸಣ್ಣಯ್ಯಂವರು ಕಂದಾಯಾವಾಗಿ ಕಟ್ಟಿದ್ದರು ಎಂದರೆ ಸರಿಯಲ್ಲ. ನಂತರ ನಿಪಿ–7ರ ಪ್ರಕಾರ ಅದರ ಕಲಂಃ ನಂಃ6ರಲ್ಲಿ ಸಣ್ಣಯ್ಯ ಬಿನ್ ಚನ್ನಯ್ಯ ಎಂದು ಕಲಂಃ 10ರಲ್ಲಿ ಕ್ರಯ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.1971 ರಿಂದ 74ರ ಸಾಲಿನಲ್ಲಿಯೇ 2ನೇ ವಾದಿಯ ಅಜ್ಜನಾದ ಸಣ್ಣಯ್ಯನವರು ತನ್ನ ಹೆಸರಿಗೆ ಖಾತೆಯನ್ನು ಮಾಡಿಸಿಕೊಂಡು ಸ್ವಾಧೀನದಲ್ಲಿ ಇದ್ದರು ಎಂದರೆ ಸರಿಯಲ್ಲ.

ಸಣ್ಣಯ್ಯನವರು ಆಸ್ತಿಯನ್ನು ಖರೀದಿಸುವ ಸಮಯದಲ್ಲಿ ಅದು ಬುಂಡಯ್ಯನವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಅದೇ ರೀತಿ ಚಿಕ್ಕಬೊಮ್ಮನನಹಳ್ಳಿ ಗ್ರಾಮದ ಸ.ನಂಃ 43ರ ಆಸ್ತಿಯು ಬುಂಡಯ್ಯನವರ ಹೆಸರಿನಲ್ಲಿ ಇತ್ತು ಎಂದರೆ ಸರಿಯಲ್ಲ. ಸದರಿ ಬುಂಡಯ್ಯನವರ ಹೆಸರಿನಲ್ಲಿ ಇದ್ದ ಚಿಕ್ಕಬೊಮ್ಮನಳ್ಳಿ ಗ್ರಾಮದ ಸ.ನಂಃ 43 ಹಾಗೂ 97ರಲ್ಲಿ ಇದ್ದ 2 ಆಸ್ತಿಗಳ ಪೈಕಿ ಸ.ನಂಃ 43ರಲ್ಲಿ ಒಂದು ಎಕರೆ ನನ್ನ ಹೆಸರಿಗೆ ಹಾಗೂ ಇನ್ನೊಂದು ಎಕರೆ ಧರ್ಮಯ್ಯನವರ ಹೆಸರಿಗೆ ಹಾಗೂ ಸ.ನಂಃ 97ರಲ್ಲಿ ಇದ್ದ ಸ್ವತ್ತಿನ ಖಾತೆ ಪ್ರತಿವಾದಿಯ ತಾತ ಸಣ್ಣಯ್ಯರವರಿಗೆ ಆಗಿರುತ್ತದೆ ಎಂದರೆ ಸರಿಯಲ್ಲ. ಧರ್ಮಯ್ಯ ದ್ಯಾವಯ್ಯರವರ ಮಗ. ನಾನು ಮತ್ತು ಧರ್ಮಯ್ಯ ಹಿರೇಹಳ್ಳಿ ದ್ಯಾವಯ್ಯನ ಸಾಕು ಮಕ್ಕಳು ಎಂದರೆ ಸರಿಯಲ್ಲ. ಸಾಕ್ಷಿಯು ಸ್ವಂತ ಮಕ್ಕಳು ಎಂದು ನುಡಿಯುತ್ತಾರೆ.

ನಿಪಿ-9ರಲ್ಲಿ ದ್ಯಾವಯ್ಯನವರ ಸಾಕುಮಗ ಧರ್ಮಯ್ಯ ಎಂದು ಇರುವುದು ಸುಳ್ಳು. 2ನೇ ವಾದಿಯ ತಾತನಾದ ಸಣ್ಣಯ್ಯನವರಿಗೆ ಸೇರಿದ ಆಸ್ತಿನ್ನು ಲಪಟಾಯಿಸಲು ಸುಳ್ಳು ದಾಖಲೆಗಳನ್ನು ಸೃಷ್ಟಿಸಲಾಗಿದೆ ಎಂದರೆ ಸರಿಯಲ್ಲ. ನಿಡಿ-15ರ ಮೊದಲೇ ಬುಂಡಯ್ಯನವರು ಸಣ್ಣಯನವರು ದಾವಾ ಅನುಸೂಚಿ ಸ್ವತ್ತನ್ನು ಮಾರಾಟ ಮಾಡಿರುರಿಂದ ನನಗೆ ದಾವಾ ಅನುಸೂಚಿ ಸ್ವತ್ತಿಲ್ಲಿ ಯಾವುದೇ ಹಕ್ಕು ಇಲ್ಲ ಎಂದರೆ ಸರಿಯಲ್ಲ. ಬುಂಡಯ್ಯನವರು ಸದರಿ ದಾವಾ ಅನುಸೂಚಿ ಸ್ವತ್ತನ್ನು ನಿಪಿ-1ರ ಪ್ರಕಾರ ಮಾರಾಟ ಮಾಡಿದ್ದರಿಂದ ತದನಂತರ ಅವರ ಕುಟುಂಬದವರಿಗೆ ಅದರಲ್ಲಿ ಯಾವುದೇ ಹಕ್ಕು, ಸ್ವಾಧೀನ ಸಂಬಂಧ ಇರಲಿಲ್ಲ ಎಂದರೆ ಸರಿಯಲ್ಲ. ವಾದಿಯರು ಈ ದಾವೆಯನ್ನು ಸದರಿ ಸ್ವತ್ತು ಅವರಿಗೆ ಸೇರಿದ್ದು ಎಂದು ಹೂಡಿರುತ್ತಾರೆ.

ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವ ಪರಿಶೀಲನಾ ಪ್ರಮಾಣ ಪತ್ರದಲ್ಲಿ ಏನು ಬರೆಯಲಾಗಿದೆ ಎಂದು ನನಗೆ ಗೊತ್ತು. ದಿಃ29-09-2022ರಲ್ಲಿ ನನ್ನ ವಯಸ್ಸು 60 ಎಂದು ಬರೆಯಿಸಿರುತ್ತೇನೆ. ದಿಃ20-11-2021ರಲ್ಲಿ ಮುಖ್ಯ ವಿಚಾರಣಾ ಪ್ರಮಾಣ ಪತ್ರಿಕೆಯಲ್ಲಿ ನನ್ನ ವಯಸ್ಸನ್ನು 60 ವರ್ಷ ಎಂದು ಬರೆಯಿಸಿರುತ್ತೇನೆ. ದಿಃ20-11-2021ರಲ್ಲಿ ನನ್ನ ವಯಸ್ಸನ್ನು 64 ಎಂದು, 22ನೇ ಸಾಲಿನಲ್ಲಿ ನನ್ನ ವಯಸ್ಸನ್ನು 60 ವರ್ಷ ಎಂದು ಬರೆಯಿಸಿರುತ್ತೀರಿ ಎಂದರೆ ಸಾಕ್ಷಿಯು ನನಗೆ 60 ವರ್ಷ ಎಂದು ನುಡಿಯುತ್ತಾರೆ. ನನ್ನಲ್ಲಿ ಅದಾರ್ ಕಾರ್ಡ್ ಇರುತ್ತದೆ ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಿಲ್ಲ. ಅದನ್ನು ನ್ಯಾಯಾಲಯಕ್ಕೆ ಹಾಜರು ಪಡಿಸಲು ನನಗೆ ತೊಂದರೆ ಇರುವುದಿಲ್ಲ. 2021 ಸಲ್ಲಿಸಿರುವ ಮುಖ್ಯ ವಿಚಾರಣ ಪ್ರಮಾಣ ಪತ್ರ ಹಾಗೂ 2022ರಲ್ಲಿ ಸಲ್ಲಿಸಿರುವ ಪರಿಶೀಲಿನ ಪ್ರಮಾಣ ಪತ್ರದ ಪ್ರಕಾರ ನಿಮ್ಮ ವಯಸ್ಸು 4 ವರ್ಷ ವ್ಯಾತ್ಯಾಸ ಇರುತ್ತದೆ ಅದ್ದರಿಂದ ನಿಮ್ಮ ವಯಸ್ಸು ಎಷ್ಟು ಎಂದರೆ 60 ವರ್ಷ ಎಂದು ನುಡಿಯುತ್ತಾರೆ. ಪ್ರಸ್ತುತ ನನಗೆ 64 ವರ್ಷ ವಯಸ್ಸು ಆಗಿರಬಹುದು.

ಬುಂಡಯ್ಯನವರು ಸಣ್ಣಯ್ಯನವರಿಗೆ ಕ್ರಯಪತ್ರ ಬರೆದುಕೊಡುವ ಸಮಯದಲ್ಲಿ ನಾನು ಹುಟ್ಟಿರಲಿಲ್ಲ. ಡಿ.ಡಬ್ಲ್ಯೂ-2 ಮತ್ತು 3ರವರು ನುಡಿದಿರುವ ಸಾಕ್ಷ್ಯವನ್ನು ನಾನು ತಿಳಿದುಕೊಂಡಿರುವುದಿಲ್ಲ. ಡಿ.ಡಬ್ಲ್ಯೂ-2 ನನಗಿಂತ ಹಿರಿಯರೋ ಕಿರಿಯರೋ ಎಂದು ನನಗೆ ತಿಳಿದಿಲ್ಲ. ಅವರು ಉಪ್ಪಾರಕೊಪ್ಪಲು ಗ್ರಾಮದವರು. ಅವರು ಉಪ್ಪಾರ ಕೊಪ್ಪಲು ಗ್ರಾಮದಿಂದ ಬಂದು ಚಿಕ್ಕಬೊಮ್ಮನಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ಡಿ.ಡಬ್ಲ್ಯೂ-3 ರವರು ನನಗಿಂತ ಹಿರಿಯರೋ ಕಿರಿಯರೋ ಎಂದು ನನಗೆ ತಿಳಿದಿಲ್ಲ. 1965ರಲ್ಲಿ ಸಣ್ಣಯ್ಯನವರಿಗೆ ಸ್ವತ್ತನ್ನು ಮಾರಾಟ ಮಾಡಿದ ನಂತರ ಅವರು ಸದರಿ ಸ್ವತ್ತಿನಲ್ಲಿ ಏನನ್ನು ಬೆಳೆದಿದ್ದಾರೆ ಎಂದರೆ ಗೊತ್ತಿಲ್ಲ ಎಂದರೆ ಸಾಕ್ಷಿಯು ಅವರು ಸದರಿ ಜಮೀನನ್ನು ಮಾಡಿಯೇ ಇಲ್ಲ ಎಂದು ನುಡಿಯುತ್ತಾರೆ. ಚಿಕ್ಕಬೊಮ್ಮಹಳ್ಳಿ ಗ್ರಾಮದ ಸ.ನಂಃ43 ಸ್ವತ್ತಿನಲ್ಲಿ 1965ನೇ ಸಾಲಿನಲ್ಲಿ ಬುಂಡಯ್ಯನವರು ಏನು ಬೆಳೆಯುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ನಾನು 1965ನೇ ಸಾಲಿನಲ್ಲಿ ಹುಟ್ಟಿಲ್ಲದೇ ಇದ್ದುದ್ದರಿಂದ ಸದರಿ ಸ್ವತ್ತಿನಲ್ಲಿ ಏನು ಬೆಳೆಯುತ್ತಿದ್ದರು ಹಾಗೂ ಸದರಿ ಸ್ವತ್ತಿಗೆ ಸಂಬಂಧಪಟ್ಟಂತೆ ಏನೇನು ವ್ಯವಹಾರಣೆಗಳು ಆಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ ಎಂದರೆ ಸರಿ.

ಸ.ನಂಃ 97ರಲ್ಲಿ ಇದೆ ಎನ್ನಲಾದ ಕೊಳವೆ ಬಾವಿಯನ್ನು ಯಾವ ವರ್ಷ ಕೊರೆಯಿಸಲಾಗಿದೆ ಎಂಬುದಕ್ಕೆ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. 1964 ರಿಂದ 1977ರವರೆಗಿನ ಕೈಬರಹದ ಪಹಣಿ ಪತ್ರಿಕೆ ಹಾಗೂ ಋಣಭಾರ ರಾಹಿತ್ಯ ಪತ್ರಗಳನ್ನು ಹಾಜರು ಪಡಿಸಿದ್ದಲ್ಲಿ ಸತ್ಯಾಂಶ ತಿಳಿಯುತ್ತದೆ ಎಂದು ಅದನ್ನು ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿಯು ಅದನ್ನು ಹಾಜರು ಪಡಿಸಿಲಾಗಿದೆ ಎಂದು ನುಡಿಯುತ್ತಾರೆ. ದಾವಾ ಅನುಸೂಚಿ ಸ್ವತ್ತಿಗೆ ಸಂಬಂಧಪಟ್ಟಂತೆ ನಾನು ಕಂದಾಯ ಅಧಿಕಾರಿಗಳನ್ನು ಷರೀಕು ಮಾಡಿಕೊಂಡು ನಾನು ಸುಳ್ಳು ದಾಖಲೆಗಳನ್ನು ಸೃಷ್ಟಿಸಿದ್ದೇನೆ ಎಂದರೆ ಸರಿಯಲ್ಲ.

(ಮುಂದುವರೆದ ಪಾಟೀ ಸವಾಲುಃ ವಾದಿಯ ಪರ ವಕೀಲರು ಸಮಯಾವಕಾಶವನ್ನು ಕೋರಿದ್ದು ಅನುಮತಿಸಲಾಯಿತು)

( ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸ.ಇದೆ.

ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು,
ಜೆ.ಎಂ.ಎಫ್.ಸಿ. ಅರಕಲಗೂಡು.